ಸಾಣೆಗುರುವನಹಳ್ಳಿ ಟ್ಯಾಂಕ್ ಏರಿಯಾದಲ್ಲಿ ಆಸ್ಪತ್ರೆಯನ್ನು ಕಟ್ಟುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಸಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜಾಜಿನಗರ ಕ್ಷೇತ್ರದ ನಿವಾಸಿಗಳು ಸಾಣೆಗುರುವನಹಳ್ಳಿ ಕೆರೆಯ ಅಂಗಳದಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಮತ್ತು ಒಂದು ಕೆ ಎಸ್. ಆರ್. ಟಿ. ಸಿ. ಡಿಪೋವನ್ನು ಕಟ್ಟಲು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ಕ್ಷೇತ್ರದ ನಿವಾಸಿಗಳ ಕೋರಿಕೆಗಳನ್ನು ನೆರವೇರಿಸಲು ಸರ್ಕಾರವು ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳಲಿರುವ ಕ್ರಮ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು) —

ಅ) ಕೆ. ಎಸ್. ಆರ್. ಟಿ. ಸಿ. ಯ ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಸದರಿ ಪ್ರದೇಶದ ಸ್ವಲ್ಪ ಭಾಗವನ್ನು ಬಸ್ ಡಿಪೋವನ್ನು ನಿರ್ಮಿಸಲು ಕೋರಿರುತ್ತಾರೆ.

ಆಸ್ಪತ್ರೆ ನಿರ್ಮಾಣಕ್ಕಾಗಿ ಆರೋಗ್ಯ ಇಲಾಖೆಯಿಂದಾಗಲೀ ಸಾರ್ವಜನಿಕರಿಂದಾಗಲೀ ಮನವಿಗಳು ಬಂದಿರುವುದಿಲ್ಲ.

ಆ) ಅನುಮೋದಿತ ವ್ಯಾಪಕ ಅಭಿವೃದ್ಧಿ ಯೋಜನೆ ಪ್ರಕಾರ ಸದರಿ ಪ್ರದೇಶವು ಉದ್ಯಾನವನಕ್ಕಾಗಿ ಪ್ರಸ್ತಾವಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸದರಿ ಉದ್ದೇಶಕ್ಕೆ ಬೇರೆ ಎಲ್ಲಿಯಾದರೂ ಸೂಕ್ತ ನಿವೇಶನಗಳನ್ನು ಹಂಚಿಕೆ ಮಾಡಲು ಪರಿಗಣಿಸುವುದು.

PRESENTATION OF PETITIONS

SRI K. KUSHALA.—I present the following petitions. i) Inclusion of Maniyani and Kolayan sub-castes of yadava Community under Backward Tribes who live in Dakshina Kannada and Kodagu Districts.

ii) Construction of Bridge on Balnadu River at Aranthidu Kukkumbalu in Sullia Taluk, Dakshina Kannada District

MR. SPEAKER.—Petitions presented.

ಗಮನ ಸೆಳೆಯುವ ಸೂಚನೆ

ಸ್ಕೌಫಂಡರಿ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ರಾಜ್ಯದಲ್ಲಿ ಸ್ಕೌಫಂಡರೀ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ ದಿನಾಂಕ ೨೫ನೇ ಆಗಸ್ಟ್ ೧೯೮೬ ರಂದು ಸ್ಕೌಫಂಡರೀ ಪದವೀಧರರು ಬೆಂಗಳೂರಿಗೆ ಬಂದು ಮೆರವಣಿಗೆ ನಡೆಸಿ ಪಂತ್ತು ಧರಣಿ ಮಾಡುತ್ತಿದ್ದಾರೆ. ಅವರ ಕುಟುಂಬದವರಿಗೆ ಕೆಲಸವನ್ನು ಕೊಡಿಸಬೇಕೆಂದು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಸ್ಕೌಫಂಡರೀ ಉದ್ಯೋಗ ಯೋಜನೆಯು ರಾಜ್ಯದಲ್ಲಿ ಜನವರಿ ೧೯೭೮ ರಿಂದ ಹಮ್ಮಿಕೊಂಡು ಜಾರಿಗೊಳಿಸಲಾಯಿತು. ಕುಟುಂಬದಲ್ಲಿ ಯಾರೂ ಸಂಪಾದಿಸುವ ಸದಸ್ಯರೂ ಇಲ್ಲದ ಹಾಗೂ ಕುಟುಂಬದ ವಾರ್ಷಿಕ ವರಮಾನ ರೂ.೬೦೦ ರೂ.ಗಳಿಗೂ ಕಮ್ಮಿ ಇರುವ ಕುಟುಂಬದ ಯಾರಾದರೂ ಪದವೀಧರ, ಸ್ನಾತಕೋತ್ತರ ಪದವೀಧರ ಅಥವಾ ಡಿಪ್ಲೋಮಾ ಪಡೆದ ಅಭ್ಯರ್ಥಿಗಳಿಗೆ